ಮುರಿದ ದಿನ ನಾನು ಮರಳಿ ತೆರಳುವೆ. ಷರತ್ತಿಗೆ ಒಪ್ಪಿದರೆ ಮದುವೆ. ಇಲ್ಲವಾದರೆ ನಾನು ಹೊರಡುವೆ'.

ನನ್ನಲ್ಲಿ ಮೋಹಿತನಾದ, ಶಂತನು ಉಲಿದ: 'ಮನಮೋಹಿನಿ ಗಂಗೆಯೆ, ನಿನ್ನನ್ನು ಅಗಲಿ ಅರೆಚಣವು ನಾನಿರಲಾರೆ. ಬಂದುಬಿಡುವೆ ನಿನ್ನೊಡನೆಯೆ. ನಿನ್ನ ಷರತ್ತುಗಳನ್ನೆಲ್ಲ ಒಪ್ಪಿ ವಚನ ಕೊಡುವೆ. ನೀನೆ ಎನ್ನ ರಾಣಿ. ಹಸ್ತಿನಾವತಿಯ ಪಟ್ಟದರಸಿ' ಎಂದು ಮಾತು ಕೊಟ್ಟ. ಶಂತನು ಮಹಾರಾಜನ ರಾಣಿಯಾಗಿ, ಹಸ್ತಿನಾವತಿಯ ಮಹಾರಾಣಿಯಾಗಿ ನಾನು ಬಂದೆ. ಶಂತನುವಿಗೆ ನನ್ನನ್ನು ಸಮರ್ಪಿಸಿಕೊಂಡೆ. ಆದರೆ ನನ್ನ ಷರತ್ತು, ಕರ್ತವ್ಯ, ಊರಿಗೆ ಮರಳುವ ಸಮಯ – ಇವುಗಳನ್ನು ಮರೆಯಲಿಲ್ಲ; ಅದಕ್ಕಾಗಿ ಕಾಯುತ್ತಿದ್ದೆ. ಸಮಯಕ್ಕೆ ಸರಿಯಾಗಿ ಗರ್ಭ ಧರಿಸಿದೆ. ಬಾಳಂತಿಯಾದೆ, ಕುಮಾರರಿಗೆ ಜನ್ಮವಿತ್ತೆ. ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳು... ಹೀಗೆ ಜನುಮವಿತ್ತ ತಕ್ಷಣ ಗಂಗಾನದಿಗೆ ಎಸೆಯುತ್ತಲೇ ಬಂದೆ. ಅಂದರೆ ನನ್ನ ಮಡಿಲಲ್ಲೇ ತೆಗೆದುಕೊಂಡು ಮುಕ್ತಿ ನೀಡುತ್ತಲೇ ಬಂದೆ.

* * *

ನಾನು ಕೊಲೆಗಾರಳೆ? ಅದರಲ್ಲಿಯೂ ಹಸುಳೆಗಳನ್ನು ನದಿಗೆಸೆಯುವ ಕಟುಕಿಯೆ? ಕುಪುತ್ರನಾಗಬಹುದು, ಕುಪುತ್ರನಿರಬಹುದು, ಆದರೆ ಕುಮಾತೆಯಾಗಲಾರಳು, ಕುಮಾತೆಯಿರಳು – ಇದು ಲೋಕ ಪ್ರಸಿದ್ಧನುಡಿ, ಇದು ಜಗತ್ತಿನಲ್ಲಿ ಅನೂಚಾನ ನಡೆದುಕೊಂಡು ಬಂದಿರುವ ಮಾನವ ವರ್ತನೆ ಶಾಸ್ತ್ರದ ಮಾತು. ಅದಕ್ಕೇ 'ನಮಾತುಃ ಪರದೈವತಂ' ಎಂಬ ನಂಬಿಕೆ. ಅದನ್ನು ಹುಸಿಗೊಳಿಸಲು ಹೊರಟಿರುವೆನೆ? ಇದೊಂದು ಭ್ರೂಣಹತ್ಯೆಯಂತೆಯೇ ಇನ್ನೊಂದು ಮಹಾಪಾಪ ಕೃತ್ಯವಲ್ಲವೆ? ವಾತ್ಸಲ್ಯಕ್ಕೆ ಇನ್ನೊಂದು ಹೆಸರೆನಿಸಿದ ಒಬ್ಬ ತಾಯಿಯಾಗಿ, ಜಗತ್ತು ಆರಾಧಿಸುವ ದೇವತೆಯಾಗಿ, ನಾನು ಯಾವ ಸಂದೇಶ ನೀಡುತ್ತಿದ್ದೇನೆ? ನನ್ನನ್ನು ಕಾಡಿತ್ತು, ವ್ಯಾಕುಲಗೊಳಿಸಿತ್ತು. ಆದರೆ ಅಷ್ಟವಸುಗಳಿಗೆ ಮಾತು ಕೊಟ್ಟಿದ್ದೇನೆ. ಶಾಪೋದ್ಧಾರದ ಭರವಸೆ ನೀಡಿದ್ದೇನೆ. ಇದೂ ಒಂದು ಲೋಕೋದ್ಧಾರದ ಪುಣ್ಯಕಾರ್ಯವಲ್ಲವೆ ? ನಾನು ಮಾಡುತ್ತಿರುವುದು ಕೊಲೆಯಲ್ಲ; ಶಾಪವಿಮೋಚನೆಗೊಳಿಸುವ ಮಾರ್ಗ. ಅದು ಬಯಕೆಯ ಸ್ವರ್ಗ. ಇಷ್ಟಾರ್ಥ ನೆರವೇರಿಸಿದ ಸಂತೃಪ್ತಿ. ಆನಂದಮಯ ಸದ್ಗತಿಗೆ ಗತಿ ನೀಡಿದ ರೀತಿ. ಇದು ಸಾಮಾನ್ಯ ಧರ್ಮದಲ್ಲಿ ಬರುವುದಿಲ್ಲ; ವಿಶೇಷ ಧರ್ಮದಡಿಯಲ್ಲಿ ಬರುವ ಆಪದ್ಧರ್ಮ ನೀತಿ. ನನ್ನ ಪ್ರಶ್ನೆಗಳಿಗೆ ನನ್ನ ಅಪರಾಧೀ ಪ್ರಜ್ಞೆಗೆ ನಾನೇ ಉತ್ತರ ಪಡೆದುಕೊಂಡೆ. ಸಮಾಧಾನ ಕಂಡುಕೊಂಡೆ. ಅದು ನೈತಿಕವೂ ಹೌದು, ವಚನ ಪಾಲನೆಯೂ ಹೌದು ಶಾಸ್ತ್ರ ಸ್ಮೃತಿಸಮ್ಮತವೂ ಹೌದು.

ಹಾಂ, ಅಷ್ಟವಸುಗಳು ಎಂದೆನಲ್ಲ... ಅವರೇ ಧರ್ಮಪ್ರಜಾಪತಿಯಿಂದ ವಸುವಿಲ್ಲಿ ಹುಟ್ಟಿದ ಮಕ್ಕಳು; ಆಪ, ಧ್ರುವ, ಧರ್ಮ, ಸೋಮ,



ಕಲಾಕೃತಿ: ಬಿ.ಪಿ. ಬ್ಯಾನರ್ಜಿ 1923 (ಕೃಪೆ: ವಿಕಿಕಾಮನ್ಸ್)

ಅನಿಲ, ಅನಲ, ಪ್ರತ್ಯೂಷ, ಪ್ರಭಾಸ ಎಂಟು ಜನ ಮಕ್ಕಳು. ನಾನು ಬ್ರಹ್ಮನ ಶಾಪದಂತೆ ಸ್ತ್ರೀರೂಪದಿಂದ ದೇವಲೋಕದಿಂದ ಭೂಮಿಗೆ ಇಳಿದು ಬರುತ್ತಿರುವಾಗ... ಅಷ್ಟವಸುಗಳು ಸಿಕ್ಕರು. ಅವರು ದುಃಖಿಸುತ್ತಿದ್ದರು. ಕಾರಣ ಕೇಳಿದಾಗ ಹೇಳಿಕೊಂಡರು; ಅವರು ದಾರಿಯಲ್ಲಿರುವ ಕಾಮಧೇನುವಿಗೆ ಹಿಂಸೆ ಕೊಟ್ಟರಂತೆ... ಕಾರಣವಾದರೂ ಇತ್ತೆ? ಅದೂ ಇಲ್ಲ; ವಿನಾಕಾರಣ. ಉಳಿದವರೆಲ್ಲ ಮುಳ್ಳಿನಿಂದ ಚುಚ್ಚಿದ್ದರೆ, ಆಪನೆಂಬವನು ಮುಳ್ಳಿನ ಬರಲಿನಿಂದಲೇ ಹೊಡೆದಿದ್ದನು. ಇದರಿಂದ ಕುಪಿತರಾದ ವಸಿಷ್ಠರು ಭೂಲೋಕದಲ್ಲಿ ಮಾನವರಾಗಿ ಜನಿಸಿ ಎಂದು ಶಪಿಸಿದರು. ತಪ್ಪಿಗಾಗಿ ಪಶ್ಚಾತ್ತಾಪಪಡುತ್ತ ವಸಿಷ್ಠರಲ್ಲಿ ಕ್ಷಮಿಸಲು ಪ್ರಾರ್ಥಿಸಿಕೊಂಡರು. 'ಗಂಗಾದೇವಿಯನ್ನು ಶರಣುಹೋಗಿ; ಶಾಪವಿಮೋಚನೆಯಾಗುತ್ತದೆ' ಎಂದರಂತೆ. ದಾರಿಯಲ್ಲಿ ಕಂಬನಿ ಮಿಡಿಯುತ್ತ, ನನ್ನ ಬರವಿಗಾಗಿ ಕಾಯುತ್ತಿದ್ದ ಅವರು ನನ್ನ ಮೊರೆಹೊಕ್ಕು ಬೇಡಿಕೊಂಡರು.

ಅವರಿಗೆ ಮಾತುಕೊಟ್ಟೆ: 'ನಾನು ಶಂತನು ರಾಜನ ಪತ್ನಿಯಾಗಿ, ನಿಮಗೆ ಜನ್ಮ ಕೊಟ್ಟು, ಅನಂತರ ಮುಕ್ತಿಯನ್ನೂ ಕೊಡುವೆ' ಎಂದು. ಆದರೆ 'ಆಪ' ಮುಳ್ಳಿನ ಬರಲಿನಿಂದ ಕ್ರೂರ ಹಿಂಸೆ ನೀಡಿದ್ದರಿಂದ ಆತ ಸ್ವಲ್ಪ ಜಾಸ್ತಿ ಶಿಕ್ಷೆ ಅನುಭವಿಸಬೇಕಾದೀತು ಎಂದೂ ಸೇರಿಸಿದ್ದೆ.

* * *

ಎಂಟನೆಯ ಮಗು ಜನಿಸಿದಾಗ ಶಂತನು ಮಹಾರಾಜ ಸೆರಗೊಡ್ಡಿ ಬೇಡಿಕೊಂಡ; ಒಬ್ಬ ಮಗನನ್ನಾದರೂ ನನಗಾಗಿ ಬಿಡೆ... ಕುಲಚಂದ್ರನಾಗಿ ಹಸ್ತಿನಾವತಿಯ ಸಾಮ್ರಾಜ್ಯ ಬೆಳಗಲು, ಮತ್ತು ನನ್ನ ಮುಕ್ತಿಗಾಗಿಯೂ 'ಪುತ್ರ' ಬೇಡವೇನೆ?

ನಾನು ಕರಗಿದೆ, ಮನಸಾ ಒಪ್ಪಿದೆ. ಅದು ಕಾಮಧೇನುವನ್ನು ಮುಳ್ಳಿನಿಂದ ಆಹತಗೊಳಿಸಿದ 'ಆಪ ವಸುವಿಗೆ' ಒದಗಿಬಂದ ಶಿಕ್ಷೆಯೂ